ಗಮನ ಸೆಳೆಯುವ ಸೂಚನೆಗಳು

1) "ಒಕ್ಕಲುತನ ಹುಟ್ಟುವಳಿ ಮಾರಾಟ ಸಮಿತಿಯ ಚುನಾವಣೆಗಳನ್ನು ಮುಂದೆ ಹಾಕಿ ಆಡಳಿತಗಾರರನ್ನು ನೇಮಿಸಿ ಆದೇಶ ಹೊರಡಿಸಿರುವ ಬಗ್ಗೆ"

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ವಿಷಯದ ಬಗ್ಗೆ ನಾನು ಮಾನ್ಯ ಧಾರ್ಮಿಕ ಮತ್ತು ದತ್ತಿ, ನಿಯಂತ್ರಿತ ಮಾರುಕಟ್ಟೆ ಮತ್ತು ಖುಷಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ. ಅಮರನಾಥ ಶೆಟ್ಟಿ (ಧಾರ್ಮಿಕ, ದತ್ತಿ, ಮಾರುಕಟ್ಟೆ ಖುಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮುಂತ್ರಿಯವರು).—ಮಾನ್ಯ ಅಧ್ಯಕ್ಷರೇ, ಸರ್ಕಾರ ಈಗಾಗಲೇ ಉದ್ದೇಶಿಸಿರುವಂತೆ ಎಲ್ಲಾ ವ್ಯವಸಾಯೋತ್ಪನ್ನಗಳ ಮಾರುಕಟ್ಟೆ ಸಮಿತಿಗಳ ಚುನಾವಣೆ, ಜೂನ್ ೮೮ ಮತ್ತು ನಂತರ ನಡೆಸ ಬೇಕಾಗಿ ರೈತರ ಹಿತದೃಷ್ಟಿಯಿಂದ ಮುಂದಿನ ಆದೇಶದವರೆಗೆ ಇವುಗಳನ್ನು ಮುಂದುಡಲಾಗಿದೆ. ನಿಗದಿತ ಕಾಲಾವಧಿಯೊಳಗೆ ಆಡಳಿತಾಧಿಕಾರಿಗಳನ್ನು ನೇಮಿಸಲು ಕೂಡ ಆದೇಶಿಸಲಾಗಿದೆ.

ಶ್ರೀ ಕೆ.ಹೆಚ್. ಪಾಟೀಲ್.—ಆದ ರಸಲುವಾಗಿ ನಾನು ಹೇಳಿದೆ. ಡೆಮಾಕ್ರಟಿಕ್ ನಾರ್ಮ್ಸ್ ಅನ್ನು ಅಪ್‌ಹೋಲ್ಡ್ ಮಾಡುವ ಸರ್ಕಾರ ಇವೊತ್ತು ಡೆಮಾಕ್ರಸಿಯನ್ನು ಎಲ್ಲಾ ಕಡೆ ಕೊಲ್ಲಲಿಕ್ಕೆ ಹೊರಟಿದೆ, ಆಡಳಿತಾಧಿಕಾರಿಗಳಿಗೆ ಅಧಿಕಾರವನ್ನು ಕೊಡುವುದಾದರೆ ಇದು ಭಾರಿ ಅನ್ಯಾಯ ಆಗುತ್ತದೆ. ಮುನಿಸಿಪಾಲಿಟಿಗಳಿಗೆ ಅರು ತಿಂಗಳು ಎಕ್ಸ್‌ಟೆಂಡ್ ಮಾಡಿದ್ದೀರಿ, ಎಪಿಎಂಸಿ ಗೆ ಮಾಡುವುದಿಲ್ಲ ಎಂದು ಹೇಳುತ್ತೀರಿ. ಇದು ಯಾವ ಧರ್ಮ, ಆದುದರಿಂದ ಇನ್ನೊಮ್ಮೆ ಮುಖ್ಯ ಮಂತ್ರಿಗಳ ಹತ್ತಿರವಾಗಲೀ, ಅಥವಾ ಕ್ಯಾಬಿನೆಟ್‌ನಲ್ಲಿಯಾಗಲೀ ವಿಚಾರ ಮಾಡಿ ಇದನ್ನು ಹೇಳಿ. ಇಲ್ಲದಿದ್ದರೆ ಇದು ನಿಮ್ಮ ಮೂಲಭೂತವಾದ ತತ್ವಕ್ಕೆ ಕೊಡಲಿ ಪೆಟ್ಟು ಆಗುತ್ತದೆ. ಅಗ್ರಿಕಲ್ಚರಲ್ ಪ್ರೊಡ್ಯೂಸ್ ಕಮಿಟಿ ಎಲೆಕ್ಟೆಡ್ ಬಾಡಿ ಇದ್ದಾಗ ಚುನಾವಣೆಗಳನ್ನು ಮಾಡಿ. ಇವೊತ್ತೇ ಚುನಾವಣೆ ಗಳನ್ನು ಮಾಡಿದರೂ ನಮ್ಮ ಅಭ್ಯಂತರ ಇಲ್ಲ, ಕಮಿಟಿ ಕಾನ್‌ಸ್ಟಿಟ್ಯೂಟ್ ಆದ ಮೇಲೆ ಹೇಗೆ ಆಗಬೇಕು ಎಂದು ವಿಚಾರ ಮಾಡಿ. ಆದರೆ ಅದಕ್ಕೆ ಇನ್‌ಸಲ್ಟ್ ಆಗುವ ರೀತಿಯಲ್ಲಿ ಕೆಲಸ ಮಾಡುತ್ತಿದ್ದೀರಿ, ಮಾಡಬೇಡಿ. ಆಡಳಿತಾಧಿಕಾರಿಗಳ ಕೈಗೆ ಅಧಿಕಾರವನ್ನು ಕೊಡುತ್ತಿದ್ದೀರೀ ನೀವು ಹೊಸದಾಗಿ ಬಂದಿದ್ದೀರಿ. ನಾನು ನಿಮಗೆ ಜೋರು ಮಾಡುವುದಿಲ್ಲ, ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ವಿಚಾರ ಮಾಡಿ ಯೋಗ್ಯವಾದ ನಿರ್ಣಯವನ್ನು ಮಾಡಿ, ನಿಮ್ಮ ಸಬ್ಜೆಕ್ಟ್ ಮಂಡನೆ ಮಾಡುವಾಗ ನಿರ್ದಿಷ್ಟವಾದ ನಿಲುವು ಪಡೆದು ಬನ್ನಿ ಎಂದು ಹೇಳುತ್ತೇನೆ.

2) ಸೂಕ್ತವಾದ ಪರೀಕ್ಷೆ,ತನಿಖೆ ಇಲ್ಲದೆ ನೀಡಲಾಗುತ್ತಿರುವ ಚಾಲಕರ ಪರವಾನಗಿ ಯಿಂದಾಗಿ.'' ದಿನಾಂಕ 8ನೇ ಮೇ 1988 ರಂದು ಹಿರಿಯೂರಿನ ಸಮೀಪ ನಡೆದ ಅಪಘಾತ ಹಾಗೂ ಉಂಟಾಗುತ್ತಿರುವ ಅಪಘಾತಗಳ ಬಗ್ಗೆ

ಶ್ರೀ ಆರ್. ವೆಂಕಟರಾವಯ್ಯ.—ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ವಿಷಯದ ಬಗ್ಗೆ ಮಾನ್ಯ ಸಾರಿಗೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ, ತಾರೀಖು ೭-೫-೧೯೮೮ ರಂದು ಬೆಳಗಿನ ಜಾವ ೩-೦೦ ಗಂಟೆಯ ವೇಳೆಯಲ್ಲಿ ಜೆ.ಡಿ.ಎಫ್ ೪೩೬ ನಂಬರಿನ ಮೆಟಡೋರ್ ವ್ಯಾನ್ ಟಿ.ಸಿ.ಎಸ್. ೧೩೩೦ ನಂಬರಿನ ಖಾಸಗಿ ಬಸ್ಸು ಒಂದಕ್ಕೆ ಡಿಕ್ಕಿ ಹೊಡೆದ ಪರಿಣಾಮವಾಗಿ ೬ ಜನರು ಸತ್ತು ೨೯ ಜನರಿಗೆ ವಿವಿಧ ರೀತಿ ಗಾಯಗಳಾಗಿದ್ದದ್ದು ವರದಿಯಾಗಿದೆ. ಸತ್ತವರೆಲ್ಲರೂ ಸಹ ಮೆಟಡೋರ್ ವ್ಯಾನ್‌ನಲ್ಲಿ ಇದ್ದವರು. ಈ ಘಟನೆ ಹಿರಿಯೂರು ಪಟ್ಟಣದಿಂದ ೮ ಕಿ. ಮೀಟರ್ ದೂರದಲ್ಲಿರುವ ವಡೆ ಹಳ್ಳಿ ಗೇಟ್ ಹತ್ತಿರ ರಾಷ್ಟ್ರೀಯ ಹೆದ್ದಾರಿ ನಂಬರು ೪ರ ಮೇಲೆ ಸಂಭವಿಸಿತು. ಅಪಘಾತಕ್ಕೆ ಒಳಗಾದ ಬಸ್ಸು ಆಂಧ್ರ ಪ್ರದೇಶಕ್ಕೂ ಮೆಟಾಡೋರ್ ವ್ಯಾನ್ ಗೋವಕ್ಕೂ ಪೋಗು